## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.9/2022

CW-4/PW-4

| | | |
|---|---|---|
| ಹೆಸರು | ಃ- | ಲಕ್ಷ್ಮೀಶ |
| ತಂದೆ ಹೆಸರು | ಃ- | ಕಂದಾಚಾರ್ |
| ವಯಸ್ಸು | ಃ- | 64 ವರ್ಷ |
| ವೃತ್ತಿ | ಃ- | ಪೌರೋಹಿತ್ಯ |
| ವಾಸ ಸ್ಥಳ | ಃ- | ಬಿಡದಿ |
| ದಿನಾಂಕ | ಃ- | 10-07-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-1 ರಿಂದ ಚಾಸಾ-3 ರವರು ನನಗೆ ಗೊತ್ತು. ಅಂದಾಜು ದಿನಾಂಕ 18.02.2021 ರಲ್ಲಿ ಚಾಸಾ-2 ರವರ ಚಿನ್ನದ ಸರ ಕಳ್ಳತನವಾಗಿದ್ದ ಬಗ್ಗೆ ಪೊಲೀಸರು ನನ್ನನ್ನು ಚಿನ್ನದ ಸರ ಸುಲಿಗೆಯಾಗಿದ್ದ ಸ್ಥಳಕ್ಕೆ ಕರೆಸಿದ್ದರು. ಸ್ಥಳದಲ್ಲಿ ಪೊಲೀಸರು ಮಹಜರನ್ನು ಬೆಳಗ್ಗೆ 11.00 ಗಂಟೆಯಿಂದ ಒಂದೂವರೆ ಗಂಟೆಗಳ ಕಾಲ ಮಾಡಿದರು. ಮಹಜರ್ ಮಾಡಿದ ಸ್ಥಳ ಇಂದಿರಾನಗರದ 6 ನೇ ಕ್ರಾಸ್. ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಿರುತ್ತೇನೆ.

2. ನಂತರ ಡಿಸೆಂಬರ್-2021 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಚಾಸಾ-2 ರವರ ಚಿನ್ನದ ಸರವನ್ನು ಪೊಲೀಸರು ಚಾಸಾ-

<u>ಸಿ.ಸಿ. ನಂ.9/2022</u>
CW-4/PW-4

1 ರವರ ವಶಕ್ಕೆ ನೀಡಿ ಮಹಜರ್ ಮಾಡಿರುತ್ತಾರೆ. ಸದರಿ ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಮಹಜರನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಿರುತ್ತೇನೆ. ಚಿನ್ನದ ಸರವನ್ನು ಬಿಡುಗಡೆ ಮಾಡುವಾಗ ಪೊಲೀಸರು ಫೋಟೋ ತೆಗೆದಿರುತ್ತಾರೆ. ಅದರ ಫೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಅದನ್ನು ನೋಡಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರಃ-</u>

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.